ವಿಷಯ :– ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳಿಂದ ಉಂಟಾದ ಅಪಘಾತಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 734 (1136)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) :– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಂದಿನ ಮೂರು ವರ್ಷಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಿಂದ ಉಂಟಾದ ಅಪಘಾತಗಳೆಷ್ಟು ? (1988–89, 1989–90, 1990–91 ಇಲ್ಲಿಯವರೆಗೆ)

ಆ) ಈ ಅಪಘಾತಗಳಿಂದ ಸಾರಿಗೆ ಸಂಸ್ಥೆಗೆ ಉಂಟಾದ ನಷ್ಟವೆಷ್ಟು ?

ಇ) ಈ ಅಪಘಾತಗಳಲ್ಲಿ ಮಡಿದವರ ಸಂಖ್ಯೆ ಮತ್ತು ಅವರಿಗೆ ಸರ್ಕಾರದಿಂದ ಪರಿಹಾರ ನೀಡಿದ ಮೊತ್ತ ? (ಬೆಂಗಳೂರಿನಿಂದ ಮೈಸೂರುವರೆಗಿನ ಮಾಹಿತಿಯನ್ನು ನೀಡುವುದು)

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :–

ಅ) 1988–89 ರಲ್ಲಿ 2,251
1989–90 ರಲ್ಲಿ 2,386
1990–91 ರಲ್ಲಿ 1,418
(ನವೆಂಬರ್ 1990ರವರೆವಿಗೆ) ———
6,055

ಆ) ರೂ. 10,47,93,575–72 ಪೈಸೆ

ಇ) ಬೆಂಗಳೂರು ಮೈಸೂರು ಮಾರ್ಗದಲ್ಲಿ ಸತ್ತವರ ಸಂಖ್ಯೆ 45.
ಪರಿಹಾರ ಧನ ಕೊಟ್ಟ ಬಗ್ಗೆ ಸದ್ಯದಲ್ಲಿ ಮಾಹಿತಿಯು ಲಭ್ಯವಿಲ್ಲ.

ಅಧ್ಯಕ್ಷರು :– ಮಂಡಿಸಲಾಯಿತು.

ಅರ್ಜಿಯನ್ನೊಪ್ಪಿಸುವುದು.

ಶ್ರೀ ಡಿ. ಹಲಗೇಗೌಡ :– ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಮೇಲುಕೋಟೆ ಹೋಬಳಿ ಬಿಲ್ಲೇನಹಳ್ಳಿಯಲ್ಲಿ ಕೆರೆಯ ನಿರ್ಮಾಣ ಕಾರ್ಯ ಪ್ರಾರಂಭವಾಗದಿರುವ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು :– ಅರ್ಜಿಯನ್ನೊಪ್ಪಿಸಲಾಯಿತು. ಈಗ ಗಮನ ಸೆಳೆಯುವ ಸೂಚನೆಗಳು.....

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮುಂಚೆ ಗುಲಬರ್ಗ ಜಿಲ್ಲೆಯ ಶಹಪೂರ ತಾಲ್ಲೂಕಿನ ಗೋಗಿ ಎಂಬಲ್ಲಿ ಗಲಾಟೆಯಾದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು :– ನಮೂದಿತ ಗಮನಸೆಳೆಯುವ ಸೂಚನೆಯನ್ನು ನಾಳೆ ತೆಗೆದುಕೊಳ್ಳೋಣ.....

(ಶ್ರೀ ವಾಟಾಳ್ ನಾಗರಾಜ್, ಶ್ರೀ ಶಿವಾನಂದ ಕೌಜಲಗಿ, ಶ್ರೀ ಪಿ. ಜಿ. ಆರ್. ಸಿಂಧ್ಯ ಮತ್ತಿತರ ಮಾನ್ಯ ಸದಸ್ಯರುಗಳು ಗುಲ್ಬರ್ಗ ಜಿಲ್ಲೆಯ ಶಹಪೂರ ತಾಲ್ಲೂಕಿನ ಗೋಗಿ ಎಂಬಲ್ಲಿ ನಡೆದ ಗೋಲಿಬಾರ್ ಪ್ರಕರಣದ ಬಗ್ಗೆ ಮಾತನಾಡಲು ಅವಕಾಶವನ್ನು ಕೊಡಬೇಕೆಂದು ಕೇಳಿಕೊಂಡರು.)

ಅಧ್ಯಕ್ಷರು :– ದಯಮಾಡಿ ತಾವುಗಳು ಒಬ್ಬೊಬ್ಬರಾಗಿ ಸಮಾಧಾನದಿಂದ ಹೇಳಿ ಈಗ ಮಾನ್ಯ ಕಮಾಲುಲ್ ಇಸ್ಲಾಮ್‌ರವರು ಮಾತನಾಡಲಿ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ :– ಶಹಪೂರ ತಾಲ್ಲೂಕಿನ ಗೋಗಿಯಲ್ಲಿ ನಡೆದ ಗೋಲಿಬಾರ್ ಬಗ್ಗೆ.

Sri Qumarul Islam : Yesterday in the Gogi town of Shahapur Taluka, in Gulbarga Dt. there was a firing and one person was killed. It is reported in Deccan Herald that it is due to some political rivalry.

Mr. Speaker : Have you given notice about this ?

ಆದರ ಬಗ್ಗೆ ತಾವುಗಳು ಲಿಖಿತ ಮೂಲಕ ಸೂಚನೆ ಕೊಟ್ಟಿದ್ದೀರಾ ?

ಶ್ರೀ ಶಿವಾನಂದ ಹೆಚ್. ಕೌಜಲಗಿ :– ಹೌದು.....

ಶ್ರೀ ಪಿ. ಜಿ. ಆರ್. ಸಿಂಧ್ಯ :– ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗ ವಿಧಾನ ಸಭಾ ಅಧಿವೇಶನ ನಡೆಯುತ್ತಾ ಇದೆ. ನಾವು ನೋಟೀಸ್ ಕೊಡದೇ ಪ್ರಸ್ತಾಪ ಮಾಡುವ ವಿಚಾರದಲ್ಲಿ ನಮ್ಮ ಕರ್ತವ್ಯ ಲೋಪವಾಗಿರಬಹುದು. ಆದರೆ ಶಹಾಪೂರ ತಾಲ್ಲೂಕಿನ ಗೋಗಿಯಲ್ಲಿ ನಡೆದ ಗಲಭೆ ಬಗ್ಗೆ ಪತ್ರಿಕೆಗಳಲ್ಲಿ ಸಾಕಷ್ಟು ವಿವರಗಳು ಪ್ರಕಟವಾಗಿವೆ. ಅದರಲ್ಲಿ ಒಬ್ಬರು ಪೋಲೀಸ್ ಫೈರಿಂಗ್‌ನಲ್ಲಿ ಸತ್ತಿದ್ದು 20 ಜನರಿಗೆ ಗಾಯಗಳಾಗಿವೆ ಎಂದು ವರದಿ ಆಗಿದೆ. ಆದರೆ ನಮಗೆ ಬಂದಿರತಕ್ಕಂಥ ವರದಿಯ ಪ್ರಕಾರ ಅಲ್ಲಿ ಇನ್ನೂ ಹೆಚ್ಚು ಜನರಿಗೆ ಗಾಯ ಮತ್ತಿತರ ಹಾನಿಗಳಾಗಿವೆ. ಆದ್ದರಿಂದ ತಾವು ನಮ್ಮ ರಕ್ಷಣೆಗೆ ಬರಬೇಕು. ಈಗ ಅಲ್ಲಿಯ ನಿಜವಾದ ಪರಿಸ್ಥಿತಿಯ ಬಗ್ಗೆ ಸರಕಾರದವರಿಂದ ಒಂದು ಉತ್ತರವನ್ನು ನಾವು ಬಯಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ನಾವು ಪತ್ರ ಮೂಲಕ ತಮ್ಮ ಗಮನಕ್ಕೆ ವಿಷಯವನ್ನು ತರಬೇಕಾಗಿತ್ತು. ಆದರೆ ಅದು ಸಕಾಲದಲ್ಲಿ ಆಗಲಿಲ್ಲ. ಆದರೆ ಈ ಒಂದು ವಿಚಾರ ಬಹಳ ಮಹತ್ವವುಳ್ಳದ್ದಾಗಿದೆ, ದಯಮಾಡಿ ಅವಕಾಶ ಕೊಡಿ.....

ಅಧ್ಯಕ್ಷರು :– ಮಾನ್ಯ ಶಿವಾನಂದ ಕೌಜಲಗಿಯವರೇ, ತಾವು ಏನು ನೋಟೀಸನ್ನು ಕೊಟ್ಟಿದ್ದೀರಿ ?

ಶ್ರೀ ಶಿವಾನಂದ ಹೆಚ್. ಕೌಜಲಗಿ :– ಶಹಪೂರ ತಾಲ್ಲೂಕಿನ ಗೋಗಿ ಎಂಬಲ್ಲಿ ನಿನ್ನೆ ದಿವಸ ಪೋಲೀಸ್ ಫೈರಿಂಗ್‌ನಲ್ಲಿ ಒಬ್ಬರು ಸತ್ತು 19 ಜನರಿಗೆ ಗಾಯವಾಗಿದೆ. ಆದರೆ ಅದಕ್ಕಿಂತಲೂ ದೊಡ್ಡ ಮಂದಿಗೆ ಗಲಭೆಯಿಂದ ತೊಂದರೆಯಾಗಿದೆ ಮತ್ತು ಗಾಯ–ನೋವು ಸಂಭವಿಸಿದೆ. ಇದು ಪೋಲೀಸರ ಅಜಾಗರೂಕತೆಯಿಂದ ಆಗಿದೆ. ಇಲಾಖೆಯ ಅಜಾಗರೂಕತೆಯಿಂದಾಗಿ ಫೈರಿಂಗ್ ನಡೆಯಿತು. ಅಲ್ಲಿ ಈಗಲೂ ಪರಿಸ್ಥಿತಿಯು ಗಂಭೀರವಾಗಿದೆ. ಇನ್ನೂ ಅಲ್ಲಿ ಗಲಭೆಯಾಗುವ ಸಂದರ್ಭ ಇದೆ. ಈ ಬಗ್ಗೆ ಸರಕಾರದವರು ಅಭಿಪ್ರಾಯ ಏನು ಎಂದು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್ :– ನಾನು ತಿಳಿದಿರುವ ಪ್ರಕಾರ ಅಲ್ಲಿ ಜಾಸ್ತಿ ಜನರು ಸತ್ತಿದ್ದಾರೆ. ಇದರ ಹಿನ್ನೆಲೆ ಏನು ? ಅಲ್ಲಿ ಪರಿಸ್ಥಿತಿಯು ಈಗ ಹತೋಟಿಯಲ್ಲಿ ಇದೆಯೇ ? ಮತ್ತು ಪರಿಸ್ಥಿತಿಯನ್ನು ಶಾಂತವಾಗಿರಿಸಲು ಹಾಗೂ ಜನರಿಗೆ ರಕ್ಷಣೆ ನೀಡಲು ಸರಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರ ಎಂಬ ಬಗ್ಗೆ ದಯಮಾಡಿ ತಿಳಿಸಬೇಕು.

Sri Qumarul Islam : Sir, the situation is tense and I therefor want to know from the Government the action that is going to be taken in this regard.

† ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಅಲ್ಲಿ ನಿನ್ನೆ 9–30 ಗಂಟೆಗೆ ಗಲಾಟೆ ಪ್ರಾರಂಭವಾಗಿದೆ. ಗೋಗಿ ಪಟ್ಟಣ ಮತ್ತು ಕೋಣಗೋಗಿ ಎಂಬ ಊರುಗಳು ಹತ್ತಿರ ಇರುವ ಊರುಗಳು. ಅಲ್ಲಿ ಸಂತೆ ಎಲ್ಲಿ ನಡೆಯಬೇಕೆಂಬ ವಿಚಾರದಲ್ಲಿ ಎರಡು ಊರುಗಳ ಜನರ ಮಧ್ಯೆ ವಿವಾದ ಇದ್ದು ಅದರ ಪರಿಣಾಮವಾಗಿ ಈ ಪರಿಸ್ಥಿತಿಯು ಬಂದಿದೆ ಎಂದು ತಿಳಿದು ಬರುತ್ತದೆ. ಅದನ್ನು ಬಗೆಹರಿಸಲು ಅಸಿಸ್ಟೆಂಟ್ ಕಮಿಶನರ್ ರವರ ಸಮ್ಮುಖದಲ್ಲಿ ಒಂದು ತೀರ್ಮಾನ ಕೈಗೊಳ್ಳಲು ಸಭೆ ಕರೆಯಲಾಗಿತ್ತು. ನಿನ್ನೆ ಎರಡೂ ಗುಂಪಿನವರು ಸೇರಿದ್ದರು. ಅದರಲ್ಲಿನ ಕೆಲವು ಯುವಕರು ಕೆಲವು ವಿಚಾರಗಳಲ್ಲಿ ಪಟ್ಟು ಹಿಡಿದು ಇಂದೇ ತೀರ್ಮಾನವಾಗಬೇಕೆಂದು ಪೋಲೀಸ್ ಠಾಣೆಗೆ ಹೋದರು. ಆದು ಬೇರೆ ವಿಷಯ. ಆ ಬಗ್ಗೆ ವಿವರವನ್ನು ನಾನು ಮತ್ತೆ ಕೊಡುತ್ತೇನೆ. ಆದರೂ ಕೂಡ ನಿನ್ನೆಯ ದಿವಸವೇ ಪೀಸ್ ಕಮಿಟಿ ಮಾಡಿದ್ದೇವೆ, ಒಬ್ಬರೇ ಸತ್ತಿದ್ದಾರೆ, ಯಾರಿಗೆ ಇಂಜೂರಿಯಾಗಿದೆ ಅವರನ್ನು ಸರ್ಕಾರಿ ಆಸ್ಪತ್ರೆ ಗುಲ್ಬರ್ಗದಲ್ಲಿ ಫ್ರೀ ಮೆಡಿಕಲ್ ಏಡ್ ಕೊಡಬೇಕೆಂದು ಆರ್ಡರ್ ಮಾಡಿದ್ದೇನೆ. ಡಿ. ಸಿ. ಯವರು ಡಿ.ಐ.ಜಿ.ಯವರು, ಎಸ್.ಪಿ. ಯವರು ನಿನ್ನೆಯಿಂದ ಅಲ್ಲಿಯೇ ಇದ್ದಾರೆ. ನಿನ್ನೆಯೇ ಸಂಬಂಧಪಟ್ಟ ಶಾಸಕರನ್ನೂ ಅಲ್ಲಿಗೆ ಕಳಿಸಿದ್ದೇನೆ. ಪರಿಸ್ಥಿತಿ ಈಗ ಹತೋಟಿಯಲ್ಲಿದೆ. ಇದರಲ್ಲಿ ರಾಜಕೀಯವಿಲ್ಲ. ಸುತೆ ಎಲ್ಲಿ ಆಗಬೇಕೆಂದು ಮೊದಲಿನಿಂದಲೂ ಅಲ್ಲಿ ಗಲಾಟೆ ಇತ್ತು, ರಾಜಕೀಯವಿಲ್ಲ. ಸತ್ತವರು 50 ವರ್ಷ ವಯಸ್ಸಿನವರು, 5 ಮಂದಿ ಮಕ್ಕಳಿದ್ದಾರೆ, 20 ಸಾವಿರ ರೂ. ಪರಿಹಾರ ಏನು ಕೊಡಬೇಕೆಂದು ಇದೆ, ಅದಕ್ಕೆ ಬದಲು 50 ಸಾವಿರ ಕೊಡಬೇಕೆಂದು ಆದೇಶ ಕೊಟ್ಟಿದ್ದೇನೆ. ನಿನ್ನೆಯೇ 15 ಸಾವಿರ ಕೊಡಲಾಗಿದೆ. ಇಂದೂ ಸಹ ಸಂಧಾನ ಆಗುತ್ತಿದೆ; ಮುಂದೆ ಕೂಡ ಏನೂ ಆಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ನಾಲ್ಕೈದು ಜನ ಸತ್ತಿದ್ದಾರೆಂದು ವದಂತಿ ಇದೆ. ಮತ್ತು ಅಲ್ಲಿನ ಪರಿಸ್ಥಿತಿ ಚಿಂತಾಜನಕವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ :– ಇಲ್ಲ, ಈಗಲೂ ನಾನು ಫೋನ್ ಮಾಡಿ ತಿಳಿದುಕೊಂಡಿದ್ದೇನೆ ಒಬ್ಬರೇ ಸತ್ತಿರುವುದು.

ಪ್ರಕಟಣೆ

ವಿಷಯ :– ಶಾಸನ ಸಭೆಯ ಮೊಗಸಾಲೆಯಲ್ಲಿ ಅನಿರ್ಬಂಧಿತ ಅವಕಾಶವನ್ನು ಕೊಟ್ಟಿರುವುದರಿಂದ ಸದಸ್ಯರಿಗೆ ಅನಾನುಕೂಲವಾಗಿರುವುದು.

ಅಧ್ಯಕ್ಷರು :– ಈಗ ಮಾನ್ಯ ಸದಸ್ಯರ ಅವಗಾಹನೆಗೆ ಒಂದು ವಿಷಯವನ್ನು ತರಲು ಇಚ್ಛಿಸುತ್ತೇನೆ. ನಮ್ಮ ಶಾಸನಸಭೆಯ ಮೊಗಸಾಲೆಗಳಲ್ಲಿ ಓಡಾಡಲು ಅನಿರ್ಬಂಧಿತ ಅವಕಾಶವನ್ನು ಕೊಟ್ಟಿರುವುದರಿಂದ ಅಥವಾ ತಡೆಯದೆ ಇರುವದರಿಂದ ಬಹಳ ಜನ ಸದಸ್ಯರಿಗೆ ಅನಾನುಕೂಲವಾಗಿದೆ; ಕೆಲವರಿಗೆ ಕುಳಿತುಕೊಳ್ಳಲೂ ಅಲ್ಲಿ ಸ್ಥಳ ಇರುವುದಿಲ್ಲ. ಕಾಫಿ ತರುವುದಕ್ಕೆ, ಸಮಾಲೋಚನೆಗೆ ಅವಕಾಶವಿರುವುದಿಲ್ಲವೆಂದು ಕೆಲವು ಶಾಸಕರು ನನ್ನ ಗಮನಕ್ಕೆ ತಂದಿದ್ದಾರೆ. ಆದಕ್ಕಾಗಿ ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ ಇವತ್ತಿನಿಂದ ನಾನು ಸಿಬ್ಬಂದಿಗೆ ಕಟ್ಟುನಿಟ್ಟಾದ ಆಜ್ಞೆಯನ್ನು ಕೊಟ್ಟು, ಶಾಸನಸಭಾಸದಸ್ಯರು, ಮಾಜಿ ಶಾಸನ ಸಭಾಸದಸ್ಯರು, ಸಂಸತ್ ಸದಸ್ಯರು, ಮಾಜಿ ಸಂಸತ್ ಸದಸ್ಯರು ಇವರನ್ನು ಹೊರತುಪಡಿಸಿ ಬೇರೆ ಯಾರನ್ನೂ ಮೊಗಸಾಲೆಗಳಿಗೆ ಬಿಡಬಾರದೆಂದು ಈಗಾಗಲೇ ನಿರ್ದೇಶನ ನೀಡಿದ್ದೇನೆ ಅವರು ಅದನ್ನು ಸರಿಯಾಗಿ ಪರಿಪಾಲನೆ ಮಾಡುತ್ತಾರೆ. ಮಾನ್ಯ ಸದಸ್ಯರು ಇದಕ್ಕೆ ಸಹಕರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಜೊತೆಗೆ ನಮ್ಮ ಆಫೀಸರ ಗ್ಯಾಲರಿಗೆ ಯಾರು ಬರಬಹುದೆಂದು ಈಗಾಗಲೇ ಮುಖ್ಯ ಕಾರ್ಯದರ್ಶಿಗಳು ನಿರ್ಣಯ ಮಾಡಿದ್ದಾರೆ. ಅದನ್ನೂ ಕೂಡ ಕರಾರುವಕ್ಕಾಗಿ ಪಾಲಿಸಬೇಕೆಂದು ಸೂಚಿಸಿದ್ದೇನೆ ಮತ್ತು ಅಧಿಕೃತ ಪತ್ರಿಕಾ ವರದಿಗಾರರಿಗೆ ಮಾತ್ರ ಮೊಗಸಾಲೆಗಳಲ್ಲಿ ಅವಕಾಶ ಕೊಡಬೇಕೆಂದು ನಿರ್ದೇಶನವನ್ನು ಸಹಾ ಕೊಟ್ಟಿದ್ದೇನೆ. ಇದಕ್ಕೆ ಎಲ್ಲರ ಸಹಕಾರವನ್ನು ಬಯಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ತಮ್ಮಿಂದ ಒಂದು ನಿರ್ದೇಶನ ಬಯಸುತ್ತೇನೆ. ನನ್ನದೇ ಉದಾಹರಣೆ ತೆಗೆದುಕೊಂಡರೆ, ತಮಗೆ ಹೆಚ್ಚು ಮನವರಿಕೆಯಾಗಬಹುದು. ತಾವು ವಿಧಾನ ಸಭೆಯ ಅಧ್ಯಕ್ಷರಾಗಿ ಕುಳಿತ ಅಪರಾಧಕ್ಕಾಗಿಯೋ, ಕಾರಣಕ್ಕಾಗಿಯೋ ಗೊತ್ತಾಗುತ್ತಿಲ್ಲ. ಮೇಲ್ಮನೆಯ ಸದಸ್ಯರು ಕೆಳಮನೆಯ ಮಾಜಿ ಸದಸ್ಯರು ಅಥವಾ ಹಾಲಿ ಇರತಕ್ಕಂಥ ಸಂಸತ್ ಸದಸ್ಯರು ಇಲ್ಲಿಗೆ ಬಂದು ಕೂರುವುದಕ್ಕೆ ಅವಕಾಶವಿಲ್ಲ. ಈಗ ಅವರುಗಳು ಮೇಲೆ ಹೋಗಿ ಕೂರುವ ವ್ಯವಸ್ಥೆಯನ್ನು ಮಾಡಲಾಗಿದೆ. ಆದರೆ, ಮೇಲ್ಮನೆಯಲ್ಲಿ ಈಗಲೂ ವಿಧಾನಸಭಾ ಸದಸ್ಯರು ಹೋದರೆ ಅಲ್ಲಿ ಕೆಳಗಡೆ ಕೂರಲು ಒಂದು ಅವಕಾಶವಿದೆ. ಇಲ್ಲೂ ಅಂತಹ ಒಂದು ಅವಕಾಶ ಮಾಡಬೇಕು. ಅನೇಕ ಜನ ಹಿಂದೆ ಮಂತ್ರಿಯಾದವರಿದ್ದಾರೆ. ಅಧ್ಯಕ್ಷರಾದವರು ಮತ್ತು ಉಪಾಧ್ಯಕ್ಷರು ಇದ್ದಾರೆ. ಅವರಿಗೆ ಮೇಲೆ ಹೋಗಿ ಕೂರಲು ಮುಜುಗರವಾಗುತ್ತದೆ ಎಂಬುದನ್ನು ತಾವು ಅರ್ಥ ಮಾಡಿಕೊಳ್ಳ ಬಹುದು. ಆದ್ದರಿಂದ, ದಯವಿಟ್ಟು ಮೇಲ್ಮನೆಯಲ್ಲಿ ಏನು ವ್ಯವಸ್ಥೆ ಇದೆಯೋ ಅದೇ ರೀತಿ ಇಲ್ಲೂ ನಾಲ್ಕೈದು ಸೀಟನ್ನಾದರೂ ಇಂತಹವರು ಬಂದಾಗ ಕೂರಲು ಕೆಳಗಡೆಯೇ ವ್ಯವಸ್ಥೆ ಮಾಡಿಕೊಟ್ಟರೆ ಬಹಳ ಅನುಕೂಲ ವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ಲೋಕಸಭೆಯಲ್ಲಿರುವಂತೆ ಇಲ್ಲಿಯೂ ಸೆಂಟ್ರಲ್ ಹಾಲ್ ಮಾಡ-ಬೇಕೆಂಬ ಯೋಜನೆ ಇತ್ತು. ಇದು ತಮ್ಮ ಕಾಲದಲ್ಲಿ ಆದರೆ ಅನುಕೂಲವಾಗುತ್ತದೆ. ಅದು ಆದರೆ ನಾವು ಹೋಗಿ ಕುಳಿತು ಮಾತನಾಡಲು ಅವಕಾಶವಾಗುತ್ತದೆ.

ಅಧ್ಯಕ್ಷರು :– ಸೆಂಟ್ರಲ್ ಹಾಲ್ ಮಾಡಲು ತಾತ್ವಿಕವಾಗಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಅದಕ್ಕೆ ನಮ್ಮ ಸರ್ಕಾರಿ ಆರ್ಕಿಟೆಕ್ಟ್ ಅವರು ಸೂಕ್ತ ಪ್ಲಾನ್ ಮತ್ತು ಎಸ್ಟಿಮೇಟನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಚುರುಕು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ :– ನಾನು ಕೇಳಿದ್ದುದು ಏನೆಂದರೆ, ಇಲ್ಲಿನ ಕಾರ್ಯಕಲಾಪಗಳನ್ನು ನೋಡಲು ಅನೇಕ ಸಲ ಹೊರಗಡೆಯಿಂದ ಅನೇಕ ಜನ ಕೇಂದ್ರ ಸಚಿವರು ಬರುವುದುಂಟು. ಹಾಗೆಯೇ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಬರುವುದುಂಟು. ಆಗ ಅವರು ಈ ಸಭೆಯ ಮೇಲ್ಗಾಗದಲ್ಲಿ ಮೋಗಿ ಕೂರುವುದಕ್ಕೆ ಬದಲು ಇಲ್ಲಿಯೇ ಕೆಳಗಡೆ ಕೂರಲು ಅವಕಾಶ ಮಾಡಿಕೊಡಬೇಕು. ದಯವಿಟ್ಟು ತಾವು ಇದನ್ನು ಸ್ವಲ್ಪ ನೋಡಬೇಕು.